ನೇಮಕ ಮಾಡಿಕೊಂಡನಂತರ ಈಗ ಏನು ನೌಕರರ ಸಮಸ್ಯೆ ಇದೆ ಅದು ಪರಿಹಾರವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕಾಗಿ ನಾವು ಸರ್ಕಾರಕ್ಕೆ ಧನ್ಯವಾದವನ್ನು ಅರ್ಪಿಸುತ್ತೇವೆ. ಈ ಇಲಾಖೆಯಲ್ಲಿ ತುಂಬಾ ಕೆಲಸವಾಗಿದೆ. ಅನೇಕ ವೆಟರ್ನರಿ ಆಸ್ಪತ್ರೆಗಳು ಪ್ರಾರಂಭವಾಗಿದೆ. ಆದರೆ ಸಿಬ್ಬಂದಿಗಳಿಲ್ಲದೆ ಈ ರೀತಿ ಪ್ರಾರಂಭವಾಗಿರತಕ್ಕ ಆಸ್ಪತೆಗಳ ಬಾಗಿಲನ್ನೇ ತೆಗೆದಿಲ್ಲ. ಅಲ್ಲಿ ಉದ್ಘಾಟನೆಯನ್ನು ಮಾಡಿ ಬಂದಿದ್ದಾರೆ. ಉದಾಹರಣೆಗೆ ಹೀರೆ ಜಂಬೂರು, ಬೆಳ್ಳಕ್ಕಿ, ತಳಗುಂದ, ಮತ್ತಿಕೋಟೆ, ಮಳವಳ್ಳಿಯೆಂದು ಶಿಕಾರಿಪುರ ತಾಲ್ಲೂಕನ್ನು ಕೊಟ್ಟಿ. ಇಡೀ ರಾಜ್ಯದಲ್ಲಿ ಹೊಸದಾಗಿ ಆಸ್ಪತ್ರೆಗಳು ಆಗಿರುವಂಥಾದ್ದು ಇವತ್ತು ಉದ್ಘಾಟನೆ ಮಾಡಿದ್ದಾರೆ. ಆದರೆ ಯಾವುದೇ ಆಸ್ಪತ್ರೆಗೆ ಸಿಬ್ಬಂದಿಗಳು ಇಲ್ಲದೆ ಅದು ಪ್ರಾರಂಭವಾಗಿಲ್ಲ. ಅದಕ್ಕೆ ತಾವು ಆ ಆಸ್ಪತೆಗಳಿಗೆ ಸಿಬ್ಬಂದಿಗಳನ್ನು ಹಾಕಿ ಬಾಗಿಲು ತೆಗೆದು ಜಾನುವಾರುಗಳಿಗೆ ಔಷಧ ಸಿಕ್ಕುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ರಾಮಲಿಂಗಾರೆಡ್ಡಿ : ಶಿವಮೊಗ್ಗ ಜಿಲ್ಲೆಯಲ್ಲಿ 17ಆಸ್ಪತ್ರೆಗಳನ್ನು ಜಿಲ್ಲಾಪರಿಷತ್ತಿನಿಂದ ತೆಗೆದಿದ್ದಾರೆ. ಅದರಲ್ಲಿ ನಾಲ್ಕಕ್ಕೆ ನಮ್ಮ ಸರ್ಕಾರ ಮಾನ್ಯತೆ ಕೊಟ್ಟಿದೆ. ಉಳಿದ 13.....

ಶ್ರೀ ಬಿ.ಎಸ್. ಯಡಿಯೂರಪ್ಪ : ಕೊಟ್ಟಿರುವಂಥಾದ್ದಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಸಿಬ್ಬಂದಿಗಳನ್ನು ಕಳುಹಿಸಿ ಆಸ್ಪತೆ ಬಾಗಿಲನ್ನು ತೆಗೆಯುವಂತಹ ವ್ಯವಸ್ಥೆಯನ್ನು ಮಾಡುತ್ತಿರಾ?

ಶ್ರೀ ರಾಮಲಿಂಗಾರೆಡ್ಡಿ : ಈಗ ತಮಗೆ ಎಲ್ಲಾ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ನಾವು ಡಾಕ್ಟರ್‌ಗಳು, ವೆಟರ್ನರಿ ಅಸಿಸ್ಟೆಂಟ್‌ಗಳು ಇವರನ್ನೆಲ್ಲಾ ಇನ್ನು 2-3 ತಿಂಗಳಲ್ಲಿ ನೇಮಕಾತಿ ಆದನಂತರ ಹಾಕಿಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ನನ್ನ ಪ್ರಶ್ನೆ ಅದಲ್ಲ, ಈಗಾಗಲೇ ಉದ್ಘಾಟನೆ ಆಗಿದೆ, ಬಾಗಿಲು ತೆಗೆದಿದೆ.

ಶ್ರೀ ರಾಮಲಿಂಗಾರೆಡ್ಡಿ : ಎಲ್ಲೆಲ್ಲಿ ಮಾನ್ಯತೆ ಕೊಟ್ಟಿದ್ದೇವೆ, ಅಲ್ಲಿ ಅದಷ್ಟು ಬೇಗ ಮಾಡಿಕೊಡುತ್ತೇವೆ.

ಹುಕ್ಕೇರಿ ಪಟ್ಟಣಕ್ಕೆ ಮುಖ್ಯಮಂತ್ರಿಗಳ ನಿಧಿಯಿಂದ ಹಣ ಬಿಡುಗಡೆ

113 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ) : ಮಾನ್ಯ ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಹುಕ್ಕೇರಿ ಪಟ್ಟಣಕ್ಕೆ ಮುಖ್ಯಮಂತ್ರಿ ಅಭಿವೃದ್ಧಿ ನಿಧಿಯಿಂದ ಅಭಿವೃದ್ಧಿ ಗ್ರಾಂಟ್ ಎಷ್ಟು ಮಂಜೂರಾಗಿದೆ, ಯಾವಾಗ ಬಿಡುಗಡೆಯಾಗಿದೆ; ಎಷ್ಟು ಬಿಡುಗಡೆಯಾಗಿದೆ?

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು):

ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಅಭಿವೃದ್ಧಿ ಕಾರ್ಯಗಳಿಗಾಗಿ ಮುಖ್ಯಮಂತ್ರಿಗಳ ನಿಧಿ ಇರುವುದಿಲ್ಲ. ಸ್ಥಾನಿಕ ಸಂಸ್ಥೆಗಳಿಗೆ ಅಭಿವೃದ್ಧಿ ಅನುದಾನವನ್ನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯಿಂದ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ಮುನಿಸಿಪಾಲಿಟಿ ಏನಾಗಿದೆ ಎಂದರೆ ಆದಾಯ ಕಡಿಮೆ ಇದ್ದು, ಖರ್ಚು ಜಾಸ್ತಿಯಾಗಿದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದರೂ ಇದುವರೆಗೂ ಯಾವುದೇ ಡೆವಲಪ್‌ಮೆಂಟ್ ಆಗಿಲ್ಲ. 2-3 ಸಾರಿ ಮಂಜೂರಾತಿಯನ್ನು ಕೊಟ್ಟರು. ಆದರೆ ಏನೂ

ಪ್ರಯೋಜನವಾಗಿಲ್ಲ. ಹಣ ಬಿಡುಗಡೆಯಾಗಿರುವುದಿಲ್ಲ. ನನ್ನ ಪ್ರಶ್ನೆಗ ಸಮಂಜಸವಾದ ಉತ್ತರ ಬಂದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವಿಶೇಷ ಅನುದಾನದ ಬಿಡುಗಡೆಯ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಇಲಾಖೆಯಿಂದ ಯಾವುದೇ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅವಕಾಶವಿರುವುದಿಲ್ಲ. ಆದರೆ ನಗರಾಭಿವೃದ್ಧಿ ಕೆಲವು ಪುರಸಭೆಗಳು, ನಗರಸಭೆಗಳು, ಆರ್ಥಿಕವಾಗಿ ದುರ್ಬಲವಿರುವಂತಹ ಸಂದರ್ಭದಲ್ಲಿ ಅವರಿಗೆ ನನ್ನ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಹಂಚಿಕೆಯಲ್ಲಿ ಸ್ವಲ್ಪ ಹಣವನ್ನು ಬಿಡುಗಡೆ ಮಾಡುವಂತಹ ಅವಶ್ಯಕತೆ ಇದೆ. ಅವರ ಬೇಡಿಕೆ ಈಗಾಗಲೇ ನಮ್ಮ ಬಳಿ ಇದೆ. ಅದನ್ನು ಸಧ್ಯದಲ್ಲೇ ಬಿಡುಗಡೆ ಮಾಡುತ್ತೇವೆ.

ಶ್ರೀ ಉಮೇಶ್ ವಿ. ಕತ್ತಿ : ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರಿಗೆ 3-4 ಸಾರಿ ಇದರ ಬಗ್ಗೆ ಪತ್ರ ಬರೆದಿದ್ದೇವೆ. ಅವರು ಮಂಜೂರಾತಿ ಮಾಡಿದ್ದಾರೆ. ದುಡ್ಡು ಬರುತ್ತಿಲ್ಲ. ಹೀಗಾಗಿ ಮುನ್ಸಿಪಾಲಿಟಿ ಲೈಟ್ ಬಿಲ್ ತುಂಬುವ ಪರಿಸ್ಥಿತಿಯು ಇಲ್ಲ. ಇಲ್ಲಿ ಯಾವುದನ್ನು ಮಾಡುವ ಪರಿಸ್ಥಿತಿಯಲಿಲ್ಲ. ಈ ರೀತಿ ಇರುವುದರಿಂದ ಇದನ್ನು ಮುಚ್ಚಬೇಕಾ, ಪ್ರಾರಂಭಿಸಬೇಕಾ? ನೀವೇ ಹೇಳಬೇಕು. ಏಕೆಂದರೆ ಮುನ್ಸಿಪಾಲಿಟಿಗೆ ಆದಾಯವಿಲ್ಲ, ಖರ್ಚು ಇದೆ. ಆದಾಯ 6 ಲಕ್ಷ ರೂ.ಗಳಾದರೆ ಖರ್ಚು 9 ಲಕ್ಷ ರೂ.ಗಳು ಇದೆ. ಆದರ ವಸೂಲು ಹೇಗೆ? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದ್ದೇವೆ. ಅವರು ಮಂಜೂರಾತಿ 3 ಲಕ್ಷ ರೂ.ಗಳಿಗೆ ಕೊಟ್ಟರು, 5 ಲಕ್ಷಕ್ಕೆ ಕೊಟ್ಟರು. ಆದರೆ ನಮಗಿಂತ ಹಿಂದಿದ್ದ ಮುನ್ಸಿಪಾಲಿಟಿಯವರಿಗೆ ಗ್ರ್ಯಾಂಟ್ ಬಂದಿದೆ. ಇದರಲ್ಲಿ ಪಕ್ಷಭೇದವಾಗಿದೆಯೋ ಏನೋ ನಮಗೆ ತಿಳಿದುಬಂದಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಸಮಂಜಸವಾದ ಉತ್ತರ ಕೊಡಬೇಕು ಎಂಬುದು ನನ್ನ ವಿನಂತಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಈಗ ನಾನು ತಮ್ಮ ಮುಖಾಂತರ ಸದಸ್ಯರಿಗೆ ಒಂದು ಭರವಸೆ ಕೊಡುವುದೇನೆಂದರೆ ಅವರ ಬೇಡಿಕೆ ಆಗಲೇ ನನ್ನ ಇಲಾಖೆಗೆ ತಲುಪಿದೆ. ಈಗ ಪುರಸಭೆ ಆರ್ಥಿಕವಾಗಿ ಬಹಳ ಹಿಂದುಳಿದಿದೆ ಎಂಬ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಸಧ್ಯದಲ್ಲೇ ಆರ್ಥಿಕವಾಗಿ ಪುರಸಭೆಗೆ ಸಹಾಯ ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ; ಆದನ್ನು ಮಾಡುತ್ತೇವೆ.

ಹೊಳೆನರಸೀಪುರ ಟೌನ್‌ನಲ್ಲಿ ಅಗ್ನಿಶಾಮಕದಳ ಸ್ಥಾಪನೆ

646.- ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಂದ ದಯವಿಟ್ಟು ಉತ್ತರಿಸುವರೆ?

ಅ) ಹೊಳೆನರಸೀಪುರ ಟೌನ್‌ನಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಇಲ್ಲದಿದ್ದಲ್ಲಿ, 94-95ರಲ್ಲಿ ಅಗ್ನಿಶಾಮಕ ದಳವನ್ನು ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಡಾ॥ ಆರ್.ಬಿ. ಚೌಧರಿ (ಕಾರಾಗೃಹ ರಾಜ್ಯ ಮಂತ್ರಿಗಳು) :

ಅ) ಇಲ್ಲ.

ಆ) ಹಾಸನ ಜಿಲ್ಲೆಯಲ್ಲಿ ಸದ್ಯಕ್ಕೆ ಹಾಸನ, ಅರಸೀಕೆರೆ ಮತ್ತು ಚನ್ನರಾಯಪಟ್ಟಣ ಈ ಮೂರು ಸ್ಥಳಗಳಲ್ಲಿ ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಪ್ರತಿಯೊಂದು ತಾಲ್ಲೂಕು ಕೇಂದ್ರದಲ್ಲಿ ಹಂತ ಹಂತವಾಗಿ ಅಗ್ನಿಶಾಮಕ ಠಾಣೆಗಳನ್ನು